# ನಿಜಾಂ ಆಳ್ವಿಕೆಯ ಕರ್ನಾಟಕದ ಚಳವಳಿ (1926 -1948)

ಡಿ.ಪುರುಷೋತ್ತಮ
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಸಿದ್ಧಾರ್ಥನಗರ, ಮೈಸೂರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಲವು ರೀತಿಯ ಭಿನ್ನ ಚಳವಳಿಗಳು ಭಾರತದಲ್ಲಿ ಜರುಗಿವೆ ಇವುಗಳಲ್ಲಿ ಮಂದಗಾಮಿ. ತೀವ್ರಗಾಮಿ ಕ್ರಾಂತಿಕಾರಿಗಳ ಹೋರಾಟದ ಜೊತೆಯಲ್ಲೇ ಪ್ರಾಂತೀಯ ರಾಜರುಗಳು ಕೂಡ ತಮ್ಮ ತಮ್ಮ ಅಸ್ತಿತ್ವ ಮತ್ತು ಪ್ರಭುತ್ವದ ಉಳಿವಿಗಾಗಿ ಆ ಸಂದರ್ಭದಲ್ಲಿ ನಡೆದ ಎಲ್ಲಾ ಚಳವಳಿಗಳನ್ನು ಹಾಗೂ ಪ್ರತಿಭಟನೆಯನ್ನು ಪ್ರೋತ್ಸಾಹಿಸಿದ ಅಥವಾ ನಿರಾಕರಿಸಿದ ಅನೇಕ ಸನ್ನಿವೇಶಗಳಿವೆ. ರಾಷ್ಟ್ರೀಯ ಐಕ್ಯತೆ ಮತ್ತು ರಾಷ್ಟ್ರೀಯತೆಯ ಪರಿಕಲ್ಪನೆ ಇಲ್ಲದ ಸಂದರ್ಭದಲ್ಲಿ ಬ್ರಿಟೀಷ್ ಪ್ರಭುತ್ವದ ವಿರುದ್ಧ ನಡೆಸಲಾದ ಎಲ್ಲಾ ಹೋರಾಟಗಳು ಕೂಡ ಸ್ವಾತಂತ್ರ್ಯ ಹೋರಾಟ ಎಂದು ಕರೆದರು. ಆದರೆ ಮುಸ್ಲಿಂ ಸಂಘಟನೆಗಳ ಹೋರಾಟವನ್ನು ಸಂಶಯತ್ಮಾಕವಾಗಿ ಕಾಣುವ ಮನಸ್ಥಿತಿಯಿಂದಾಗಿ ರಾಷ್ಟ್ರ ನಿರ್ಮಾಣದ ಹಂತದಲ್ಲಿ ಆದ ಐಕ್ಯತೆಯ ಮಹಾಒಡಕಾಗಿ ಇದನ್ನು ಕಾಣಬಹುದು.

ಕಾಂಗ್ರೆಸ್ ಮತ್ತು ಇತರ ಸಂಘಟಣೆಗಳ ನೇತೃತ್ವದ ಹೋರಾಟವನ್ನು ಗೌರವಿಸುವ ನಾವು ಮುಸ್ಲಿಂ ಸಂಘಟನೆಗಳ ಹೋರಾಟವನ್ನು ಪರಕೀಯವಾಗಿ ನೋಡುವ ದೃಷ್ಟಿ ಯಾವ ಸಂದರ್ಭದಲ್ಲೂ ಬದಲಾಗಲಿಲ್ಲ. ಮುಸ್ಲಿಂ ರಾಜರುಗಳ ಇತಿಹಾಸವನ್ನು ಅನ್ಯವಾಗಿಯೇ ಕಾಣುವ ಮನಸ್ಥಿತಿಗಳು ಬದಲಾಗಲೇ ಇಲ್ಲ. ಬದಲಾಗದ ಮನಸ್ಥಿತಿಗಳಿಂದ ಕಟ್ಟಿದ ಇತಿಹಾಸ ಕೂಡ ಸರಿಯಾದ ಕ್ರಮದ ಇತಿಹಾಸವನ್ನು ಕಟ್ಟಿಕೊಡಲು ಅಂತಹ ಮನಸುಗಳಿಗೆ ಸಾಧ್ಯವೇ ಆಗಲಿಲ್ಲ.

ಧರ್ಮದ ಹಿನ್ನಲೆಯನ್ನು ಪ್ರಧಾನವಾಗಿಸಿಕೊಂಡು ಚರಿತ್ರೆಯನ್ನು ಅಧ್ಯಯನ ಮಾಡುವುದು ಕೂಡ ಇತಿಹಾಸ ಸಂಶೋಧನ ಸಿದ್ಧಾಂತಕ್ಕೆ ಅಪಚಾರ ಮಾಡಿದಂತೆ. ಆಗೇ ನೋಡಿದರೆ ನಮ್ಮ ದೇಶವನ್ನು ಸುಮಾರು ಇನ್ನೂ ವರ್ಷಗಳ ಕಾಲ ದೀರ್ಘವಾಗಿ ಹಲವು ರೀತಿಗಳಿಂದ ಶೋಷಣೆ, ಲೂಟಿ ಮಾಡಿದ ಬ್ರಿಟೀಷರ ಬಗ್ಗೆ ಮೃದು ಧೋರಣೆಯನ್ನು ಹೊಂದಿರುವ ಜನ; ಈ ನೆಲಕ್ಕೆ ಅಪಾರ ಕೊಡುಗೆಯನ್ನು ನೀಡಿದ ಮುಸ್ಲಿಂ ದೊರೆಗಳನ್ನು ಬಹಳ ಕ್ರೂರವಾಗಿ ಚಿತ್ರಿಸಿರುವುದರೊಂದಿಗೆ ಹಲವು ಅನರ್ಥಗಳಿಗೆ ಎಡೆಮಾಡಿಕೊಡುವಂತೆ ನಿರೂಪಿತವಾಗಿದೆ.

ಎಲ್ಲಾ ಪ್ರಾಂತೀಯ ರಾಜ ಮನೆತನಗಳು ಕೂಡ ಸ್ವಾತಂತ್ರ್ಯದ ಸಂದರ್ಭದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಕ್ಷಿಪ್ರವಾದ ಕಾರ್ಯಚರಣೆಯನ್ನು ಮಾಡಿರುವರು. ಭಾರತದಲ್ಲಿಂತೂ ಅನೇಕ ರಾಜಮನೆತನಗಳು ಪ್ರಜಾಪ್ರಭುತ್ವದ ವಿರೋಧಿ ನಿಲುವನ್ನು ಅವರು ಹೊಂದಿದ್ದರು. ಕಾಶ್ಮೀರದ ಮಹಾರಾಜ, ಜುನಾಗಾದ್ ನಿಜಾಮ, ಹೈದರಬಾದಿನ ನಿಜಾಂ ಹಾಗೂ ಮೈಸೂರು ಸಂಸ್ಥಾನವು ಸೇರಿದಂತೆ ಇವರುಗಳು ತಪ್ಪದೇ ಆದ ಅಸ್ತಿತ್ವಕ್ಕೆ ಹೋರಾಟವನ್ನು ಮುಂದುವರಿಸಿದರು. ಆ ಸಂದರ್ಭದಲ್ಲಿ ನಿಜಾಂನ ಆಳ್ವಿಕೆಯ ಪ್ರದೇಶದಲ್ಲಿ ಹಿಂಸಾತ್ಮವಾದ ಘಟನೆಗಳು ಜರುಗಿದವು. ಆ ಘಟನೆಗಳಿಗೆ ಹಲವು ರೀತಿಯ ಆಡಳಿತಾತ್ಮಕವಾದ, ತಮ್ಮ ಅಸ್ತಿತ್ವದ ಉಳಿವಿನ ಕಾರಣದ ಹಿನ್ನೆಲೆಯ ಮನಸ್ಥಿತಿಯ ನಿರ್ಣಗಳು ಕಾರಣ ಇರಬಹುದು.

1. ಒಂದು ರಾಷ್ಟ್ರ ಅಥವಾ ಒಂದು ಒಕ್ಕೂಟಕ್ಕೆ ಸೇರದಿರವ ಕಾರಣಗಳು ಇರಬಹುದೇ
2. ಈಗಾಗಲೇ ಶ್ರೀಮಂತವಾಗಿರುವ ರಾಜ ಪ್ರಭುತ್ವಗಳು ಪ್ರಜಾಪ್ರಭುತ್ವದ ಸಾರ್ವತಿಕರಣದಿಂದ ಆಗಬಹುದಾದ ವೈಯುಕ್ತಿಕ ನಷ್ಟಕ್ಕೆ ನಿರಾಕರಿಸುವ ಕಾರಣಗಳು ಇರಬಹದೇ.
3. ತಮ್ಮ ರಾಜ್ಯದ ಆರ್ಥಿಕ ಲಾಭ ಅಥವಾ ಸಂಪತ್ತಿನ ಶ್ರೀಮಂತಿಕೆಯನ್ನು ರಾಷ್ಟ್ರದ ಹೆಸರಿನಲ್ಲಿ ಇತರ ರಾಜ್ಯಗಳ ಪ್ರಗತಿಗೆ ಅಥವಾ ಹಿಂದುಳಿದ ಪ್ರದೇಶಗಳಗೆ ಹಂಚಿಕೆ ಆಗುವ ಆತಂಕ ಇರಬಹುದೇ ?
4. ಉತ್ತರ ಭಾರತದ ಪ್ರಭುತ್ವವನ್ನು ನಿರಾಕರಿಸಲು ಇರಬಹುದೇ?
5. ಅನ್ಯ ಧರ್ಮಿಯರ ಪ್ರಭುತ್ವನ್ನು ಒಪ್ಪಿಕೊಂಡು, ಎಲ್ಲಿ ಗೌಣವಾಗುವೆವು ಎಂಬ ಕಾರಣ ಇರಬಹುದೇ?
6. ತಮ್ಮ ಪ್ರಾಂತ್ಯದ ಅಥವಾ ರಾಜ್ಯದ ಪ್ರಾಬಲ್ಯ ಮತ್ತು ಪ್ರಭುತ್ವನ್ನು ಉಳಸಿಕೊಳ್ಳುವ ಕಾರಣ ಇರಬಹುದೇ?
7. ಮುಸ್ಲಿಂ ಸಂಘಟನೆಗಳನ್ನು ಒಪ್ಪಿಕೊಂಡು ತನ್ನ ಧರ್ಮಿಯರ ಒಕ್ಕೂಟವನ್ನು ಸೇರುವ ನೀರಿಕ್ಷೆಯ ಕಾರಣಗಳು ಇರಬಹುದೇ?
8. 1939ರ ಲಾಹೋರ್ ಒಪ್ಪಂದ ನಂತರ ಮುಸ್ಲಿಂ ರಾಷ್ಟ್ರದ ಪ್ರತ್ಯೇಕತೆಯ ಬೇಡಿಕೆ ಹೆಚ್ಚಾಗುವ ಕಾರಣವೆ?

ಈ ಎಲ್ಲಾ ಪ್ರಶ್ನೆಗಳನ್ನು ಆಧಾರವಾಗಿಟ್ಟುಕೊಂಡು ರಜಾಕಾರರ ನಿಲವು ಮತ್ತು ಸಂಘಟನೆಯ ಮೂಲ ಆಶಯವನ್ನು ಕೇಂದ್ರಿಕರಿಸಿಕೊಂಡು ಸಂಶೋಧನೆಯನ್ನು ನಡೆಸುವುದು ಮುಖ್ಯ ಹಾಗೂ ಪ್ರಧಾನ ಉದ್ದೇಶವಾಗಿದೆ.

ಹೈದರಾಬಾದ್ ಕರ್ನಾಟಕದ ಪ್ರದೇಶಗಳಾದ ಬೀದರ್, ಗುಲಬರ್ಗ ಮತ್ತು ರಾಯಚೂರ್ ಪ್ರದೇಶಗಳಲ್ಲಿ ರಜಾಕಾರರ ಸೈನ್ಯ ಪದ್ಧತಿಯಲ್ಲಿದ್ದ ಹಿಂದೂ ಸೈನಿಕರ ಅರ್ಥಿಕ ಪರಿಸ್ಥಿತಿ ಮತ್ತು ಅಲ್ಲಿಯ ಪ್ರಾದೇಶಿಕ ಸಮಸ್ಯೆಗಳು ಹಾಗೂ ಅವರ ಅನಿವಾರ್ಯವಾದ ನಡೆಯನ್ನು ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕು.

ಈ ರೀತಿಯ ಹಲವು ಸಮಸ್ಯೆಗಳನ್ನು ಆಧರಿಸಿ ನೈಜ್ಯವಾದ ಚರಿತ್ರೆಯ ದಾಖಲೆಯನ್ನು ಗುರುತಿಸುವ ಪ್ರಯತ್ನ ಇದಾಗಿದೆ. ಈ ದೆಸೆಯಲ್ಲಿ ಸದರಿ ಸಂಶೋಧನಾ ವಿಷಯಕ್ಕೆ ನೇರವಾಗಿ ಸಂಬಂಧಿಸಿದ ಯಾವುದೇ ಕೃತಿ ಅಥವಾ ಈ ವಿಷಯ ನ್ನು ಪ್ರಧಾನವಾಗಿ ಕೇಂದ್ರಿಕರಿಸಿ ಸಂಶೋಧಗಳು ನಡೆದಿರುವುದಿಲ್ಲ. ಹೈದರಾಬಾದ್ ಸಂಸ್ಥಾನವನ್ನು ಕುರಿತು ಹಲವಾರು ಕೃತಿ ಪ್ರಕಟವಾಗಿದ್ದು ಅವುಗಳು ಹೈದರಾಬಾದ್ ಕರ್ನಾಟಕವನ್ನು ಕುರಿತಾಗಿ ಈ ಭಾಗದ ರಾಜಕೀಯ ಚರಿತ್ರೆಯ ಬಗ್ಗೆ ಬೆಳಕು ಚೆಲ್ಲುತ್ತವೆ.

ಕರ್ನಾಟಕದ ಇತಿಹಾಸವನ್ನು ಕುರಿತು ಸಂಶೋಧನೆಗಳು 19 ಮತ್ತು 20 ನೇ ಶತಮಾನದಲ್ಲಿ ಪ್ರಾರಂಭಗೊಂಡು ಸುಮಾರು ಎರಡು ಶತಮಾನಗಳು ಕಳೆದಿವೆ ಆದರೂ ಈ ಕಾಲವಾವಧಿಯಲ್ಲಿ ಹೈದರಾಬಾದ್ ಕರ್ನಾಟಕವನ್ನು ಕುರಿತು ಹೆಚ್ಚು ಗಂಭೀರವಾದ ವಸ್ತುನಿಷ್ಠವಾದ ಸಂಶೋಧನಾ ಕೆಲಸಗಳು ಬಹು ವಿರಳವಾಗಿ ನಡೆದಿವೆ. ಅವರಲ್ಲಿ ಕೆಲವು ವಿದ್ವಾಂಸರು ಹೈದರಾಬಾದ್ ಕರ್ನಾಟಕವನ್ನು ಕುರಿತು ಸಂಶೋಧನೆ ನಡೆಸಲು ಮುಂದಾಗಿದ್ದಾರೆ. ಅವರಲ್ಲಿ ಪ್ರಮುಖರಾದವರು ಎಂದರೆ ಇಂಗ್ಲೆಂಡಿನ ಶೇರ್ ಮನ್ ಟೇಲರ್, ಡಾ. ಪುರುಷೋತ್ತಮ, ಡಾ.ರಮೇಶನ್ ಎನ್., ಆಸ್ಟ್ರೇಲಿಯದ ಬೆನಿಚು ಮತ್ತು ಡಾ ವೈ. ಎಚ್. ನಾಯಕ್ವಾಡಿ ಈ ಅಧ್ಯಯನಕ್ಕೆ ಸಂಬಂಧಿಸಂದತೆ ಹಲವು ಗ್ರಂಥಗಳನ್ನು, ಸಾರ ಲೇಖನವನ್ನು, ಸಂಪ್ರಬಂಧಗಳನ್ನು ರಚಿಸಲು ಮುಂದಾಗಿರುವುದು ಒಳ್ಳೆಯ ಆಶದಾಯಕ ಬೆಳವಣಿಗೆಗಳಾಗಿದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹಂತದಲ್ಲಿ ದೇಶ ಪ್ರೇಮ ಕಾಡಿಗಿಚ್ಚಿನಂತೆ ದೇಶಾದ್ಯಂತ ಹಬ್ಬಿ ರಾಷ್ಟ್ರೀಯತೆ ಮತ್ತು ರಾಷ್ಟ್ರ ನಿರ್ಮಾಣ ಪ್ರಜ್ಞೆ ಅತಿ ಪ್ರಧಾನವಾದ ಭಾವಾವೇಶದ ನೆಲೆಯನ್ನು ತಲುಪಿದ ಕಾಲವದು. ಸ್ವಾತಂತ್ರ್ಯ ನಂತರ ಚಾರಿತ್ರಿಕ ಸಂಶೋಧನೆ ಮತ್ತು ಚರಿತ್ರೆಯ ಪುನರ್ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಪ್ರಗತಿಪರವಾದ ಸಂಶೋಧನಾ ಕಾರ್ಯಗಳು ನಡೆಯಬೇಕಿದೆ.

ಬ್ರಿಟಿಷರ ಆಳ್ವಿಕೆ ಭಾರತದಲ್ಲಿ ಕೊನೆಗೊಂಡ ಸಂದರ್ಭದಲ್ಲಿ ನಮ್ಮ ರಾಷ್ಟ್ರೀಯ ಇತಿಹಾಸಕಾರರು ಬ್ರಿಟೀಷ್ ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ಚರಿತ್ರೆಯನ್ನು ಪುನರ್ ರೂಪಿಸುವ ಕೆಲಸ ಪ್ರಾರಂಭಿಸಿದರು. ಭಾರತದ ರಾಷ್ಟ್ರೀಯ ಚಳವಳಿಯ ಸಂದೇಶ ಮತ್ತು ಹೋರಾಟದ ಸ್ಫೂರ್ತಿ ಪ್ರವಾಹದಂತೆ ಚರಿತ್ರೆಯ ಸಂಶೋಧನಾ ಕಾರ್ಯ ಕ್ಷೇತ್ರವನ್ನು ಪ್ರವೇಶಿಸಿತು. ಈ ರೀತಿಯ ಮನೋಭಾವದಿಂದ ನಿರ್ಮಾಣವಾದ ಚರಿತ್ರೆಯ ಬರಹಗಳಲ್ಲಿ ರಾಷ್ಟ್ರೀಯ ಪ್ರಜ್ಞೆ, ದೇಶಭಕ್ತಿ ಬಹಳ ಆಳವಾಗಿ ಬೇರೂರಿತ್ತು. ಇದು ಬ್ರಿಟೀಷ್ ಸಾಮ್ರಾಜ್ಯಶಾಹಿ, ವಸಾಹತುಶಾಹಿ ಧೋರಣೆಗಳನ್ನು ಅಲ್ಲಗೆಳೆದವು.

ಇಂತಹ ಚಿಂತನೆ ಮತ್ತು ಪ್ರಜ್ಞೆ ಕೇವಲ ಸ್ವಾತಂತ್ರ್ಯ ಪೂರ್ವದ ಇತಿಹಾಸವನ್ನು ತಿರಸ್ಕರಿಸಿಕೊಳ್ಳುವಲ್ಲಿ ಸಂಧಾನ ಪಟ್ಟುಕೊಂಡಿರದೆ. ಸ್ವಾತಂತ್ರ್ಯ ಚಳವಳಿಯ ಇತಿಹಾಸವನ್ನು ಮತ್ತೊಮ್ಮೆ ಹೊಸದಾಗಿ ಹಾಗೂ ರಾಷ್ಟ್ರೀಯ ದೃಷ್ಟಿ ಕೋನದಲ್ಲಿ ಪುನರ್ ರಚಿಸುವ ಕಾರ್ಯದಲ್ಲಿ ತೊಡಗಿದರು. ಆದರೆ ಈ ಕಾರ್ಯದಲ್ಲಿ ಎಲ್ಲಾ ಧರ್ಮದ ಹೋರಾಟಗಾರರನ್ನು ಒಂದೇ ನೆಲೆಯಲ್ಲಿ ಪುನರ್ ರಚಿಸಿಕೊಂಡು ವಿಶ್ಲೇಷಿಸಿರುವುದರಲ್ಲಿ ತೊಡಕಿದೆ. ಸ್ವಾತಂತ್ರ್ಯ ಭಾರತದ ಮೊದಲ ದಶಕದಲ್ಲಿ ಪಟ್ಟಾಭಿ ಸೀತಾರಾಮಯ್ಯ ನವರ 'ಭಾರತದ ರಾಷ್ಟ್ರೀಯ ಕಾಂಗ್ರೆಸ್ ಚರಿತ್ರೆ' ತಾರಚಂದ್ರ 'ಸ್ವಾತಂತ್ರ್ಯ ಚಳುವಳಿಯ ಇತಿಹಾಸ ಈ ನೆಲೆಯಲ್ಲಿ ಪ್ರಕಟಗೊಂಡವು.

ಎರಡನೇ ಹಂತದಲ್ಲಿ ಭಾರತದ ಇತಿಹಾಸವನ್ನು ಸ್ವಾತಂತ್ರ್ಯ ಚಳವಳಿಯ ಪ್ರಾಂತೀಯ ಆಯಾಮಗಳನ್ನು ಕುರಿತು ಬರೆಯಲಾಯಿತು ಹಾಗೇಯೇ ಈ ಸಂಶೋಧನೆಗಳು ಮುಂದುವೆರಯಿತು. ಮೂರನೇ ಹಂತದಲ್ಲಿ ದೇಶದಲ್ಲಿ ಸಮಗ್ರವಾಗಿ

ನಡೆದ ಸ್ವಾತಂತ್ರ್ಯ ಚಳವಳಿಯ ತೀಕ್ಷ್ಣ ಸ್ವರೂಪದ ಘಟನೆಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಹಾಗೇಯೇ ನಾಲ್ಕನೇ ಹಂತದಲ್ಲಿ ದಲಿತ ಮತ್ತು ಸಬಾಲ್ಟನ್ ವಿಚಾರಧಾರೆಗಳನು ಚರ್ಚಿಸಲಾಗಿದೆ.

ಚರಿತ್ರೆಯ ಪರಿಕಲ್ಪನೆ, ಅಧ್ಯಯನದ ವಿಧಾನ, ಸಾಧನಗಳೂ ಮುಂತಾದವುಗಳ ಬಗ್ಗೆ ಮುಕ್ತ ಚರ್ಚೆ ನಡೆದು ಗ್ರಂಥಗಳು ಪ್ರಕಟಗೊಂಡವು ಹೀಗೆ ಮೇಲಿನ ತತ್ವಗಳಡಿ ನಾಲ್ಕ ಭಿನ್ನ ಆಯಾಮಗಳ ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಸದರಿ ಅಧ್ಯಯನ ಇಂತಹ ಆಯಾಮಗಳ ಎಲ್ಲೇಯ ಪರಿಮಿತಿಗೆ ಒಳಪಡಿಸಿ ನೋಡುವುದು ಕಷ್ಟ ಸಾಧ್ಯವಾಗಿದೆ. ಕಾಲದ ದೃಷ್ಟಿಯಿಂದ ಸ್ವಾತಂತ್ರ್ಯ ಸಂದರ್ಭದ ವಿಚಾರವಾದರೂ ಇದರಲ್ಲಿ ರಾಷ್ಟ್ರೀಯ ಹೋರಾಟದ ಬಗ್ಗೆ ದನಿ ಇಲ್ಲ. ಪ್ರಾಂತೀಯ ಪ್ರಭುತ್ವಕ್ಕೂ ನೇರವಾಗಿ ಒಳಪಟ್ಟರೂ ಘಟನೆಗಳ ಬಗ್ಗೆ ಜರುಗಿರುವ ಮಾಹಿತಿಯ ದತ್ತಾಂಶವೂ ದೇಶ ರಾಷ್ಟ್ರ ವಿರೋಧಿ ನಲೆಯಲ್ಲಿ ಬಿಂಬಿತವಾಗಿವೆ. ಇಂತಹ ವಿಷಯಗಳು ಯಾವ ಆಯಾಮಗಳಿಗೂ ಒಳಪಡುವುದಿಲ್ಲ.

ಹೈದರಾಬಾದ್ ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಅಧ್ಯಯನಗಳು 19 ನೇ ಶತಮಾನದಲ್ಲಿ ಹೆಚ್ಚಾಗಿ ಆರಂಭವಾದವು. ಇಲ್ಲಿಯವರೆಗೆ ಈ ಪ್ರದೇಶದ ಇತಿಹಾಸಕ್ಕೆ ಸಂಬಂಧಿಸಿದತೆ ಹೇರಳವಾಗಿ ಹೊರಬಂದಿದೆ. ಆದರೂ ಹೆಚ್ಚು ಸೂಕ್ಷ್ಮವಾದ ವಿಚಾರಗಳಲ್ಲಿ ಗಂಭೀರವಾದ ಅಧ್ಯಯನದ ಕೊರತೆ ಎದ್ದು ಕಾಣುತ್ತದೆ.

ಹೈದರಾಬಾದ್ ಕರ್ನಾಟಕದ ಇತಿಹಾಸ ಕುರಿತು ಕೆಲವು ಅಧ್ಯಯನಗಳು ಹೊರಬಂದಿವೆ . ಆ ಅಧ್ಯಯನಗಳಲ್ಲಿ ಹೈದರಾಬಾದ್ ಈಗೀನ ತೆಲಂಗಾಣ, ಮರಾಠವಾಡಗಳ ಇತಿಹಾಸವನ್ನು ಕಾಣಬಹುದು. ಈಗೀನ ಬೀದರ್, ಗುಲಬರ್ಗ ಮತ್ತು ರಾಯಚೂರು ಜಿಲ್ಲೆಗಳ ಕುರಿತಾದ ಗಂಭೀರವಾದ ಮಾಹಿತಿಗಳು ಲಭ್ಯವಿರುವುದಿಲ್ಲ. ಆದರೆ ಇತ್ತೀಚಿನ ಕೆಲ ಸಂಶೋಧಕರು ಈ ಪ್ರದೇಶಗಳ ಕುರಿತು ಅಧ್ಯಾಯ ಮತ್ತು ಸಂಶೋಧನೆಗಳನ್ನು ನಡೆಸಿದ್ದಾರೆ.

ಫಾತುಲ್ಲಾಖಾನ್ ಎಂ.ಎ ಇವರ 'History of Administration reforms in Hyderabad state' ಶೀಲಾರಾಜ್ ಅವರ 'ಮಿಡಿವಲಿಸಂ ಟು ಮಾಡನಿರ್ಸಂ ಸೋಶಿಯೋ ಎಕನಾಮಿಕ್ ಅಂಡ್ ಕಲ್ಚರ್ ಹಿಸ್ಟರಿ ಆಫ್ ಹೈದರಾಬಾದ್' ಯೂಸೇಫ್ ಹುಸೇನ್ ಅವರ 'ದಿ ಫಸ್ಟ್ ನಿಜಾಂ ದಿ ಲೈಫ್ ಅಂಡ್ ಟೈಮ್ಸ್ ಆಫ್ ನಿಜಾಂ ಉಲ್ ಮುಲ್ಕ್ ಅಸಫ್ ಝಾ ಫಸ್ಟ್' ನರೇಂದ್ರ ಲೂಥರ್ ಅವರ 'ಹೈದರಾಬಾದ್ ಮೆಮೊರಿಸ್ ಆಫ್ ದಿ ಸಿಟಿ'

ಜಿ. ಎಸ್. ಹಾಲಪ್ಪ ಅವರು ಕರ್ನಾಟಕದ ಪ್ರಸಿದ್ಧ ಇತಿಹಾಸಕಾರರು ಇವರ ಅನೇಕ ಕೃತಿಗಳನ್ನು ಮತ್ತು ಲೇಖನಗಳನ್ನು ಬರೆದಿದ್ದು ನನ್ನ ವಿಷಯಕ್ಕೆ ಸಂಬಂಧಿಸಿದ ಅವರ ಕೆಲ ಕೃತಿಗಳನ್ನು ಮಾತ್ರ ಸಾಹಿತ್ಯ ವಿಮರ್ಶೆಗೆ ಒಳಪಡಿಸಿರುತ್ತೇನೆ.

'ಹಿಸ್ಟರಿ ಆಫ್ ಫ್ರೀಡಂ ಮೂವ್ಮೆಂಟ್ ಇನ್ ಕರ್ನಾಟಕ' ಜಿ.ಎಸ್. ಹಾಲಪ್ಪ ಅವರು ಸಂಪಾದಿಸಿದ ಈ ಕೃತಿಯ 2 ಸಂಪುಟಗಳಂದ ಕೂಡಿದ್ದು 1964ರಲ್ಲಿ ಬಿಡುಗಡೆ ಹೊಂದಿತು. ಇದರಲ್ಲಿ 879 ಪುಟಗಳಿದ್ದು ಈ ಕೃತಿಯನ್ನು ಸರ್ವಶಿಕ್ಷಣ ಇಲಾಖೆ ಪ್ರಕಟಗೊಳಿಸಿದೆ.

೧೯೪೭ ಅಗಸ್ಟ್ ೧೫ರಂದು ಭಾರತ ಸ್ವತಂತ್ರವಾಯಿತು. ಆದರೆ ಆಗ ಭಾರತದೊಡನೆ ವಿಲೀನವಾಗಲು ಬಯಸಿದ ತನ್ನ ಸಂಸ್ಥಾನದ ಬಹುಜನರ ಅಭಿಪ್ರಾಯವನ್ನು ವಿರೋಧಿಸಿದ ಹೈದರಾಬಾದಿನ ನಿಜಾಮ ಮೀರ್ ಉಸ್ಮಾನ್ ಅಲಿ, "ಡೆಕ್ಕನ್ ರೇಡಿಯೋ" (ಅಥವಾ "ನಿಜಾಮ್ ರೇಡಿಯೋ") ಮೂಲಕ ಹೈದರಾಬಾದ ಸಂಸ್ಥಾನವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿದ. ನಿರೀಕ್ಷೆಯಂತೆ ಪಾಕಿಸ್ತಾನವು ಹೈದರಾಬಾದ ಸ್ವತಂತ್ರ ರಾಷ್ಟ್ರವೆಂದು ಮಾನ್ಯ ಮಾಡಿದ ಮೊದಲ ದೇಶವಾಯಿತು. ಭಾರತಕ್ಕೆ ಸ್ವಾತಂತ್ರ್ಯ ದೊರೆಯುವ ಹಲವು ವರ್ಷಗಳು ಮೊದಲಿನಿಂದ, ನಿಜಾಮ್ "ಸೋಲರಿಯದ ಅಲ್ಲಾಹುವಿನ ಸೈನಿಕರು" ಎಂದು ಕರೆದು ಕೊಳ್ಳುತ್ತಿದ್ದ ತನ್ನ ಸೇನೆಗೆ ಮತ್ತು ನಿಜಾಂ ಪೋಲಿಸರಿಗೆ ಬ್ರಿಟಿಷರ ಸೇನಾಧಿಕಾರಿಗಳಿಂದ ತರಬೇತಿ ಶಿಬಿರಗಳನ್ನು ನೆಡೆಸಿದ್ದ ಮತ್ತು ಆಗ ಪ್ರಸಿದ್ಧವಾಗಿದ್ದ ಸಿಡ್ನಿ ಕಾಟನ್ ಬಂದೂಕುಗಳು ಮತ್ತು ಅಪಾರ ಪ್ರಮಾಣದ ಮದ್ದುಗುಂಡುಗಳನ್ನು ಸಂಗ್ರಹಿಸಿದ್ದ.ಆ ಕಾಲಲ್ಲಿ ವಿಶ್ವದ ಗಣನೀಯ ಶ್ರೀಮಂತರಲ್ಲಿ ಒಬ್ಬನಾಗಿದ್ದ ನಿಜಾಮ್ ಮೀರ್ ಉಸ್ಮಾನ್ ಅಲಿಗೆ, ಹೈದರಾಬಾದ ಸಂಸ್ಥಾನವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಲು ಬ್ರಿಟಿಷ್ ಹಾಗು ಪಾಕಿಸ್ತಾನಿ ರಾಜಕಾರಣಿಗಳ ಪ್ರತ್ಯಕ್ಷ ಮತ್ತು ಪರೋಕ್ಷ ಬೆಂಬಲವಿತ್ತು. ಬಿಜಾಪುರ, ಧಾರವಾಡ, ಬೆಳಗಾವಿ, ಉ. ಕನ್ನಡ, ಜಿಲ್ಲೆಗಳ ಶಿಕ್ಷಣ ವ್ಯವಸ್ಥೆಯ ಬಗ್ಗೆ ವಿವರಣೆ ನೀಡಿದೆ. ಹೈದರಾಬಾದ್ ಸಂಸ್ಥಾನದಲ್ಲಿ ಉರ್ದು ಭಾಷೆಗೆ ಮನ್ನಣೆ ನೀಡಿದ್ದರು. ಸಂಸ್ಥಾನದಲ್ಲಿ ಮರಾಠಿ, ತೆಲುಗು, ಕನ್ನಡ, ಭಾಷೆಗಳ ಬಹುಸಂಖ್ಯಾತರು ಇದ್ದರೂ ಉರ್ದು ಭಾಷೆಯನ್ನೇ ಸಂಸ್ಥಾನದ ದೇಶಿಭಾಷೆಯಾಗಿ ಮಾಡಿದ ಪ್ರಯತ್ನ ಈ ಕೃತಿಯಲ್ಲಿದೆ. ಹೈದರಾಬಾದ್ ಸಂಸ್ಥಾನದಲ್ಲಿ ಇತ್ತೆಹಾದುಲ್ ಮುಸಲ್ಮಾನ್ ಎಂಬ ಮುಸ್ಲಿಂ ಸಂಘಟನೆಯು ರೂಪುಗೊಂಡಿದುದರ ಬಗ್ಗೆ ಅದರ ಚಟುವಟಿಕೆಗಳ ಬಗ್ಗೆ ವಿವರಣೆಯು ಇದೆ. ಈ ಸಂಘಟನೆಯಲ್ಲಿ ಕೆಲಸ ಮಾಡಿದ ಕಾರ್ಯಕರ್ತರು ರಜಾಕಾರರು, ಸ್ವಯಂ ಸೇವಕರು ಎಂದು ಕರೆಯುತ್ತಾರೆ.

ಭಾರತದೊಡನೆ ವಿಲೀನಗೊಳ್ಳುವ ಉದ್ದೇಶದಿಂದ ಹೈದರಾಬಾದಿನ ಪ್ರಜೆಗಳು ಗಾಂಧೀ ಪ್ರಣೀತ ಅಹಿಂಸಾತ್ಮಕ ಚಳುವಳಿ ಪ್ರಾರಂಭಿಸಿದ್ದರು. ಇದರ ನೇತೃತ್ವವನ್ನು ಸಂಸ್ಥಾನ ಕಾಂಗ್ರೆಸ್ ಮುಖಂಡರಾದ ಸ್ವಾಮಿ ರಾಮಾನಂದ ತೀರ್ಥರು ವಹಿಸಿದ್ದರು. ಈ ಚಳುವಳಿಯನ್ನು ಹತ್ತಿಕ್ಕಲು ನಿಜಾಮನು ತನ್ನ ಪೋಲೀಸ್ ಬಲವನ್ನು ಅತ್ಯಂತ ಕ್ರೂರವಾಗಿ ಉಪಯೋಗಿಸಿದನು. ಇದಲ್ಲದೆ, ತನ್ನ ವಿರೋಧಿಗಳನ್ನು ಸಂಪೂರ್ಣವಾಗಿ ನಾಶ ಮಾಡಲು ಕಾಸಿಂ ರಜವಿ ಎಂಬ ಭಯೋತ್ಪಾದಕನ ನೇತ್ರತ್ವದಲ್ಲಿ ರಜಾಕಾರ(-ರಜಾಕಾರ ಎನ್ನುವದು ಪರ್ಶಿಯನ್ ಭಾಷೆಯ ಪದ ಮತ್ತು ಇದರ ಅರ್ಥ ಸ್ವಯಂಸೇವಕ-) ಹೆಸರಿನ ಪಡೆಯನ್ನು ಕೂಡಾ ನಿಸ್ಸಹಾಯಕ ಪ್ರಜೆಗಳ ಮೇಲೆ ದಾಳಿಗಿಳಿಸಿದನು. ಕಾಸಿಂ ರಜ್ವಿ ಈಗ ಮಹಾರಾಷ್ಟ್ರ ರಾಜ್ಯದಲ್ಲಿರು ಲಾತೂರಿನಲ್ಲಿ ಒಬ್ಬ ಮಾಮೂಲಿ ವಕೀಲನಾಗಿದ್ದ. ಈತ ಉಗ್ರವಾದಿ ಸಂಘಟನೆ 'ಇತಿಹಾದುಲ್ ಮುಸಲ್ಮಾನ್' ದ ಅಧ್ಯಕ್ಷನಾಗಿದ್ದ ಕೂಡಾ. ನಿಜಾಮನು ಹೈದರಾಬಾದ ಸಂಸ್ಥಾನವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿದ ದಿನದಂದು, ಈ ರಜಾಕಾರರು,ವಿಶೇಷವಾಗಿ ಹೈದರಾಬಾದಿನಲ್ಲಿ ಸಾವಿರಾರು ಜನ ಅಮಾಯಕರ ಮೇಲೆ ದಾಳಿಯಿಟ್ಟು

ಲೂಟಿ, ಅತ್ಯಾಚಾರ, ದೌರ್ಜನ್ಯ ನಡೆಸಿದರು. ಇಂದಿನ ತೆಲಂಗಾಣ ಪ್ರದೇಶ, ದಕ್ಷಿಣ ಮಹಾರಾಷ್ಟ್ರ ಮತ್ತು ಹೊಸಪೇಟೆಯ ಬಳಿಯಿರುವ ತುಂಗಭದ್ರಾ ತೀರದವರೆಗೆ ವಿಸ್ತರಿಸಿದ್ದ ಹೈದರಾಬಾದ ಸಂಸ್ಥಾನದ ಜನ, ೧೮ ಸಪ್ಟಂಬರ ೧೯೪೮ ಸಂಜೆ ಆರು ಗಂಟೆಯವರೆಗೆ ನಿರಂತರವಾಗಿ ಹಿಂಸೆ, ಕೊಲೆ, ಸುಲಿಗೆ ಮತ್ತು ದೌರ್ಜನ್ಯಕ್ಕೆ ಸಿಲುಕಿದರೂ, ಭಾರತದೊಡನೆ ಹೈದರಾಬಾದ ಸಂಸ್ಥಾನದ ವಿಲೀನಕ್ಕಾಗಿ ಹೋರಾಡಿದರು ಪೋಲೀಸರೂ ಸಹ ರಜಾಕಾರರಿಗೆ ಕಡಿಮೆ ಇಲ್ಲದಂತೆ ವರ್ತಿಸುತ್ತಿದ್ದರು. . ನಿಜಾಮನು ಹೊರಡಿಸಿದ 'ಕೊಡಲಿ ಬರಾದ್ ಫರ್ಮಾನ ಮೇರೆಗೆ ಪೋಲೀಸರು ಹಿಂದುಗಳ ಬಳಿಯಿದ್ದ ನಿಯಮಬದ್ಧ ಬಂದೂಕುಗಳನ್ನಲ್ಲದೆ, ಕೊಡಲಿ, ಕುಡಗೋಲುಗಳನ್ನು ಸಹ ಕಿತ್ತುಕೊಂಡು ರಜಾಕಾರರಲ್ಲಿ ಹಂಚಿದರು.

೧೯೪೭ನೆಯ ಇಸವಿಯ ಕಾರಹುಣ್ಣಿವೆಯೆಂದು ಕಲ್ಬುರ್ಗಿಯ ಮಹಾಗಾಂವದ ಗ್ರಾಮಸ್ಥರೆಲ್ಲ ಸೇರಿ ಹಬ್ಬವನ್ನು ಆಚರಿಸುತ್ತಿದ್ದಾಗ, ರಜಾಕಾರರ ದೊಡ್ಡ ಗುಂಪೊಂದು ಗ್ರಾಮದ ಮೇಲೆ ದಾಳಿ ಮಾಡಿತು. ಗಂಡಸರೆಲ್ಲ ಊರಿನ ಒಂದು ಪಾರ್ಶ್ವಕ್ಕೆ ನಡೆದಾಗ ರಜಾಕಾರರು ಊರಿನಲ್ಲಿ ನುಗ್ಗಿ, ಮನೆಗಳನ್ನು ಲೂಟಿ ಮಾಡುತ್ತ, ಹೆಂಗಸರ ಮೇಲೆ ಅತ್ಯಾಚಾರಕ್ಕೂ ಮುಂದಾದರು. ತಕ್ಷಣವೇ ಅಕ್ಕಮ್ಮ, ಮಹಾದೇವಿ, ರಟ್ಟಗಲ್ಲ ಸೂಗಮ್ಮ, ಹಟ್ಟಿ ಗುರುಬಸವ್ವ ಮೊದಲಾದ ಮಹಿಳೆಯರು ಮನೆಗಳ ಮಹಡಿ ಏರಿ ರಜಾಕಾರರ ಮೇಲೆ ಕವಣೆಗಲ್ಲುಗಳನ್ನು ಬೀಸಿದ್ದಲ್ಲದೆ ಕಾದ ಎಣ್ಣೆಯನ್ನು ಸುರುವತೊಡಗಿದರು. ರಜಾಕಾರರು ಹಿಮ್ಮೆಟ್ಟಬೇಕಾಯಿತು. ಆ ದಿನದಿಂದ ಹಲವು ಮಹಿಳೆಯರು ಸಾರ್ವಜನಿಕವಾಗಿ ಗಾಂಧಿ ಟೊಪ್ಪಿಗೆ ಧರಿಸಲಾರಂಭಿಸಿದರು.

ಹೈದರಾಬಾದ್ ಕರ್ನಾಟಕದಲ್ಲಿನ ಸ್ವಾತಂತ್ರ್ಯ ಹೋರಾಟದ ಜೊತೆಗಿನ ಕರ್ನಾಟಕದ ಏಕೀಕರಣ ಭಾಷಿಕ ಹೋರಾಟದ ಹುಟ್ಟು ಅದರ ಬೆಳಣಿಗೆಯನ್ನು ಒಳಗೊಂಡಿದ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳನ್ನು ಅನೇಕ ಕೃತಿ ಪ್ರಸ್ಥಾಪ ಮಾಡಿವೆ. ಆದರೆ ಕನ್ನಡ ನಾಡು ಪುನರ್ ನಿರ್ಮಾಣದ ಹಂತದಲ್ಲಿ ಅನೇಕ ಸಂಘ ಸಂಸ್ಥೆಗಳು, ಹೋರಾಟವನ್ನು ಚಳವಳಿಯನ್ನು ರೂಪಿಸುವಲ್ಲಿ ಭಾಷಿಕವಾದ ಸಂಘಟಣೆ, ಪ್ರಭುತ್ವದ ವಿರುದ್ಧದ ದನಿ ಎಂದು ಹೈದರಾಬಾದ್ ಸಂಸ್ಥಾನ ಕ್ಷೀಪ್ರವಾದ ಕಾರ್ಯಾಚರಣೆಯನ್ನು ಭಿನ್ನ ದನಿಯಲ್ಲಿ ಇತಿಹಾಸ ದಾಖಲಿಸಿರುವುದು ಅನೇಕ ಕೃತಿಯಲ್ಲಿ ಧ್ವನಿತವಾಗಿದೆ. ಆದರೆ ರಜಾಕಾರರ ನಿಲುವು ಮತ್ತು ಉದ್ದೇಶವನ್ನು ಗ್ರಹಿಸುವಲ್ಲಿ ಅನೇಕ ಕೃತಿಗಳು ಸೋತಿರುವುದು ವೇದ್ಯವಾಗಿದೆ.

## ಪರಾಮರ್ಶೆ

1.Muneer Ahmed Ph.d dissertation titled 'Muslim politics in Hyderbad. 1980
2.S.R. Date 'Bhagangar struggle'
3.El. Edroos, Hyderabad of the seven Loaves, Canada,1992
4.Sadat Ali, `Rries Thanksgiving , madras-1919
5.K.M. Munsgi, End of An Era, Delhi, 1991
6.N.G. Rang, Distinguised Acquaintances, Hyderbad, 1976
7.N. Rameam, ` History of Freedom Struggle in Hyderbad, Vol-04, Hyderbad, 1995.
8.History of Freedom Movement in Karnataka- G.S Halappa.
9.K.V. Narayana Ravo, The emergence of Andrapradesh
10. Dr. B.S. Dengal, Hyderabad Freedom Struggle,
11. Khnderao Kulakarani, Hyderbad Freedam Struggle.

12. ಸೂರ್ಯನಾಥ್ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು.
13. ಗೋಪಲರಾವ್ ಹೇಜಾಬ್, ಹೈದರಾಬಾದ್ ಮುಕ್ತಿ ಸಂಘರ್ಷ.
14. ಹಳೇಮನೆ ರಾಜಶೇಖರ, 'ಹೈದರಾಬಾದ್ ಕರ್ನಾಟಕ ಸಾಹಿತ್ಯ ಮತ್ತು ರಾಜಕಾರಣ'
15. ನವರಾಜ್ ಆಗೊಂಬೆ ಎಸ್, ಜೀಮ್ ಚರಿತ್ತಾವಳಿ ಸರದಾರ್ ವಲ್ಲಭಭಾಯಿ ಪಟೇಲ್
16. ಡಾ.ಎಂಬಿ. ಮರಕಿಣಿ, ನೂರು ಘಟನೆ- ಸಾವಿರ ನೆನಪುಗಳು
17. ಕೆ.ಎಂ. ಮುನ್ಶಿ, The End of an Era
18. ರಹಮತ್ ತರೀಕೆರೆ, ರಾಜಧರ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2019
19. ಸಂ: ಡಾ.ಎಂ, ಕೊಟ್ರೇಶ್, ಕಲ್ಯಾಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2010.